**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ. ಸಿ. ನಂ. 34/2024**

ಸಿಡಬ್ಲ್ಯೂ-7/ಪಿಡಬ್ಲ್ಯೂ-5

| | |
|---|---|
| ಸಾಕ್ಷಿದಾರರ ಹೆಸರು | ಸುಧಾ ಹಂಚಿನಮನಿ |
| ಗಂಡನ ಹೆಸರು | ಪ್ರಭುಲಿಂಗ |
| ವಯಸ್ಸು | 28 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ ಸ್ಥಳ | ಅರಳೇಶ್ವರ ಗ್ರಾಮ |

**ದಿನಾಂಕ :25-02-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ಚಾಸಾ-1 ನನ್ನ ಮೈದುನ. ಚಾಸಾ-6 ನನ್ನ ಮಾವ. ಚಾಸಾ-8 ರಿಂದ 12 ರವರ ಪರಿಚಯ ಇದೆ.

2. ಘಟನಾ ಪೂರ್ವದಲ್ಲಿ ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನ ಬಳಿ ಇದ್ದ ವಿದ್ಯುತ್ ಟಿ.ಸಿಯಿಂದ ಹೋಗಿದ್ದ ಸಂಪರ್ಕದ ಲೈನ್ ಗಳು ಪದೇ ಪದೇ ಹರಿದು ಬೀಳುತ್ತಿದ್ದವು. ಸದರಿ ಸಮಸ್ಯೆಯ ಬಗ್ಗೆ ದುರಸ್ತಿಗಾಗಿ ಅರ್ಜಿಯನುನ ಗ್ರಾಮದ ಜನರು ಅಕ್ಕಿಆಲೂರಿನ ವಿದ್ಯುತ್ ಶಾಖೆಗೆ ಸಲ್ಲಿಸಿದ್ದರು. ಸದರಿ ಅರ್ಜಗೆ ಸ್ಪಂದಿಸಿ ಸಂಬಂದಪಟ್ಟ ವಿದ್ಯುತ್ ಇಲಾಖೆಯವರು ಹಳೇಯ ವಿದ್ಯುತ್ ತಂತಿಗಳನ್ನೇ ಜೋಡಿಸಿ ದುರಸ್ತಿ ಪಡಿಸಿರುವುದನ್ನು ಹೊರತುಪಡಿಸಿ ಹೊಸದಾದ ತಂತಿಗಳನ್ನು ಹಾಕಿರಲಿಲ್ಲ. ಹಾಗಿದ್ದಾಗ ನನ್ನ ಗಂಡ ಪ್ರಭುಲಿಂಗ ರವರು ದಿಃ 1-10-2022 ರಂದು ಬೆಳಗ್ಗೆ 11 ಗಂಟೆಗೆ ಜಮೀನಿಗೆ ಕೆಲಸಕ್ಕೆ ಹೋಗಿದ್ದರು. ಕೆಲಸಕ್ಕೆ ಹೋದ ನಂತರ ಸಂಜೆ 7 ಗಂಟೆಯಾದರೂ ನನ್ನ ಗಂಡು ಬರದೇ ಇದ ಕಾರಣಕ್ಕೆ ಅವರನ್ನು ಹುಡುಕಿಕೊಂಡು ಚಾಸಾ-6 ರವರು ಜಮೀನಿನ ಹತ್ತಿರ

ಹೋಗಿರುತ್ತಾರೆ. ಹಾಗೆ ಹೋದಾಗ ನನ್ನ ಗಂಡ ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನ ಬಳಿ ಮರಣ ಹೊಂದಿದ್ದನ್ನು ನೋಡಿ ಗ್ರಾಮದ ಜನರಿಗೆ ತಿಳಿಸಿರುತ್ತಾರೆ. ನನ್ನ ಗಂಡ ಘಟನಾ ಸ್ಥಳದಲ್ಲಿ ಹರಿದು ಬಿದ್ದ ವಿದ್ಯುತ್ ತಂತಿಯು ಬಲ ಕಾಲಿಗೆ ತಗುಲಿ ಮರಣ ಹೊಂದಿರುತ್ತಾನೆ ಎಂದು ಗೊತ್ತಾಗಿರುತ್ತದೆ. ನನ್ನ ಗಂಡನ ಸಾವಿಗೆ 3 ಜನ ಆರೋಪಿಗಳ ನಿರ್ಲಕ್ಷತನವೇ ಕಾರಣವಾಗಿರುತ್ತದೆ. ಘಟನೆಗೆ ಸಂಬಂಧಿಸಿದಂತೆ ಚಾಸಾ-1 ರವರು ಪಿರ್ಯಾದನ್ನು ಪೊಲೀಸ್ ಠಾಣೆಯಲ್ಲಿ ದಾಖಲಿಸಿರುತ್ತಾರೆ. ಘಟನೆಗೆ ಸಂಬಂಧಿಸಿದಂತೆ ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಎಸ್.ಆರ್.ಪಿ ವಕೀಲರಿಂದ:**

1. ಘಟನೆಗೆ ಸಂಬಂಧಿಸಿದಂತೆ ನನ್ನ ಹೇಳಿಕೆಯನ್ನು ಪೊಲೀಸರು ನನ್ನ ಮನೆಯಲ್ಲಿಯೇ ತೆಗೆದುಕೊಂಡಿರುತ್ತಾರೆ. ನನ್ನ ಹೇಳಿಕೆಯೊಂದಿಗೆ ಚಾಸಾ-6 ರವರ ಹೇಳಿಯನ್ನು ತೆಗೆದು ಕೊಂಡಿರುತ್ತಾರೆ. ಘಟನಾ ಪೂರ್ವದಲ್ಲಿ ಯಾವ ಯಾವ ದಿನಾಂಕಗಳಲ್ಲಿ ಹಲವಾರು ಬಾರಿ ಘಟನಾ ಸ್ಥಳದಲ್ಲಿ ವಿದ್ಯುತ್ ತಂತಿಯು ಹರಿದು ಬಿದ್ದಿತ್ತು ಎಂದು ಗೊತ್ತಿಲ್ಲ. ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನಲ್ಲಿ ಇರುವ ವಿದ್ಯುತ್ ಟಿ.ಸಿ ಯಿಂದ ನನ್ನ ಮಾವ ಚಾಸಾ-6 ರವರ ಜಮೀನಿಗೆ ಸುಮಾರು 250 ಮೀ. ದೂರ ಇದೆ. ಚಾಸಾ-6 ರವರು ಜಮೀನಿನಲ್ಲಿ 2017 ರಲ್ಲಿ ಕೊಳವೆ ಬಾವಿ ತೆಗೆಸಿದ್ದರು. ಆ ಸಮಯಕ್ಕೆ ಸಂಬಂಧಪಟ್ಟ ವಿದ್ಯುತ್ ಇಲಾಖೆ ಅಧಿಕಾರಿಗಳು ಹೊಸದಾದ ವಿದ್ಯುತ್ ಕಂಬ ಮತ್ತು ತಂತಿಗಳನ್ನು ಉಪಯೋಗಿಸಿ ನಮ್ಮ ಜಮೀನಿನಲ್ಲಿದ್ದ ಕೊಳವೆ ಬಾವಿಗೆ ಸಂಪರ್ಕ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ.

2. ನಮ್ಮ ಜಮೀನಿನಿಂದ ಕೊಳವೆ ಬಾವಿ ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನಲ್ಲಿದ್ದ ವಿದ್ಯುತ್ ಟಿ.ಸಿ ಯಿಂದ ಸಂಪರ್ಕ ಪಡೆಯಲಾಗಿತ್ತು. ಘಟನಾ ದಿನ ನನ್ನ ಮೃತ ಗಂಡ ಗುರುಲಿಂಗಪ್ಪ ಚಿಕ್ಕೇರಿ ಜಮೀನಿನಲ್ಲಿ ಇದ್ದ ಸದರಿ ಟಿ.ಸಿಯ ವಿದ್ಯುತ್ ತಂತಿಗೆ



ಅಳವಡಿಸಿದ್ದ ಕಾರ್ಬನ್ ಭಾಗವನ್ನು ಕೊಕ್ಕೆಯ ಮೂಲಕ ಶುಚಿ ಮಾಡಲು ಎಳೆದಾಗ ವಿದ್ಯುತ್ ತಂತಿಯು ಹರಿದು ಬಿದ್ದು, ನನ್ನ ಗಂಡನ ಕಾಲಿಗೆ ಮೃತಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡನ ಬಲಕಾಲಿನ ಮೇಲೆ ವಿದ್ಯುತ್ ತಂತಿ ತಾಗಿದ ಗಾಯ ಇದೆ ಎಂದರೆ ಸರಿ. ನನ್ನ ಗಂಡನ ಸಾವಿಗೆ ಮೇಲೆ

ಹೇಳಿದ ಸಂದರ್ಭವು ಕಾರಣವಾಗಿದ್ದು, ಅದರಲ್ಲಿ ಆರೋಪಿಗಳ ಯಾವುದೇ ನಿರ್ಲಕ್ಷತೆ ಮತ್ತು ಅಜಾರೂಕತೆ ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ

**<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್</u>**

**<u>ಸಿ. ಸಿ. ನಂ. 34/2024</u>**

ಸಿಡಬ್ಲ್ಯೂ-6/ಪಿಡಬ್ಲ್ಯೂ-4

| | |
|---|---|
| ಸಾಕ್ಷಿದಾರರ ಹೆಸರು | ಚನ್ನಪ್ಪ ಹಂಚಿನಮನಿ |
| ತಂದೆ ಹೆಸರು | ಶಿವರಾಯಪ್ಪ |
| ವಯಸ್ಸು | 80 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಅರಳೇಶ್ವರ ಗ್ರಾಮ |

**ದಿನಾಂಕ :25-02-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

1. ಚಾಸಾ-1 ನನ್ನ ಮಗ. ಚಾಸಾ-7 ನನ್ನ ಸೊಸೆ. ಚಾಸಾ-8 ರಿಂದ 12 ರವರ ಪರಿಚಯ ಇದೆ.

2. ಸುಮಾರು 2 ವರ್ಷ 6 ತಿಂಗಳ ಹಿಂದೆ ನನ್ನ ಮಗ ಪ್ರಬುಲಿಂಗ ಹಂಚಿನಮನಿ ರವರು ಜಮೀನಿಗೆ ಹೋದಾಗ ವಿದ್ಯುತ್ ಅವಘಡದಿಂದ ಮೃತಪಟ್ಟಿರುತ್ತಾರೆ. ಘಟನಾ ದಿನದಂದು ನನ್ನ ಮಗ ಜಮೀನಿಗೆ ಹೋಗುತ್ತೇನೆ ಎಂದು ಮನೆಯಿಂದ ಬೆಳಗ್ಗೆ 10.00 ಗಂಟೆಗೆ ಹೊರಟಿದ್ದನು. ಸದರಿ ರಾತ್ರಿ 8 ಗಂಟೆಯಾದರೂ ನನ್ನ ಮಗ ಬರಲಿಲ್ಲ ಎಂದು ಆತನನ್ನು ನಾನೇ ಹುಡುಕಿಕೊಂಡು ಜಮೀನಿನ ಹತ್ತಿರ ಹೋದಾಗ ಆತನು ವಿದ್ಯುತ್ ಸ್ಪರ್ಶಗೊಂಡು ಬಿದ್ದಿದ್ದು ಕಂಡು ಬಂದಿತ್ತು. ಆತನು ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನ ಹತ್ತಿರ ಬಿದ್ದಿದ್ದನು. ವಿದ್ಯುತ್ ಸ್ಪರ್ಶವು ನನ್ನ ಮಗನ ಎರಡೂ ಕಾಲುಗಳಿಗೆ ಸ್ಪರ್ಶಿಸಿ ಆತನು ಮರಣ ಹೊಂದಿದ್ದನು. ಸದರಿ ಸಂಗತಿಯನ್ನು ಗ್ರಾಮದ ಹಲವು ಜನರಿಗೆ ತಿಳಿಸಿ ಘಟನಾ ಸ್ಥಳಕ್ಕೆ ಚಾಸಾ-8, 11 ಮತ್ತು ಇನ್ನೂ ಸಾಕಷ್ಟು ಜನರನ್ನು ಕರೆದುಕೊಂಡು ಬಂದು ನನ್ನ

ಮಗನನ್ನು ಹಾನಗಲ್ಲನ ತಾಲೂಕು ಆಸ್ಪತ್ರೆಗೆ ದಾಖಲು ಮಾಡಿದ್ದೆವು. ನನ್ನ ಮಗನ ಸಾವಿಗೆ ವಿದುತ್ ಕಂಬದಿಂದ ಹರಿದು ಬಿದ್ದಿದ್ದ ತಂತಿಯು ಕಾರಣವಾಗಿದ್ದು, ಅದನ್ನು ಸರಿಯಾಗಿ ದುರಸ್ತಿಪಡಿಸದ ವಿದ್ಯುತ್ ಇಲಾಖೆಯ ಅಧಿಕಾರಿಗಳ ತಪ್ಪಿನಿಂದ ಆಗಿರುತ್ತದೆ.

3. ಸಾಕ್ಷಿಯು ಒಂದು ದಾಖಲೆಯನ್ನು ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಸಹಿಯನ್ನು ಗುರುತಿಸಿದ ದಾಖಲೆಯು ಘಟನಾ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ–3 ಎಂದು ಗುರುತಿಸಿದ್ದು, ಅದರಲ್ಲಿ ಸಾಕ್ಷಿ ನೋಡಿ ಗುರುತಿಸಿದ ಸಹಿಯನ್ನು ನಿ.ಪಿ–3(ಸಿ) ಎಂದು ಗುರುತಿಸಲಾಯಿತು. ನನ್ನ ಮಗ ವಿದ್ಯುತ್ ಸ್ಪರ್ಶಗೊಂಡು ಬಿದ್ದಿದ್ದ ಘಟನಾ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಸದರಿ ಘಟನಾ ಸ್ಥಳದಲ್ಲಿ ಆಡೂರು ಪೊಲೀಸರು ಚಕ್ಕುಬಂದಿಯನ್ನು ಬರೆದಿರುತ್ತಾರೆ. ಆ ಸಮಯಕ್ಕೆ ಗುರುಲಿಂಗಪ್ಪ ಮತ್ತು ಸಾಕಷ್ಟು ಜನರು ಇದ್ದರು. ಚಕ್ಕುಬಂದಿಯಲ್ಲಿ ಏನು ಬರೆದಿರುತ್ತಾರೆಂದು ಗೊತ್ತಿಲ್ಲ ಮತ್ತು ನನಗೆ ಪೊಲೀಸರು ಓದಿ ತಿಳಿಸಿರುವುದಿಲ್ಲ. ಸಾಕ್ಷಿಯು ಒಂದು ಛಾಯಾ ಚಿತ್ರವನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಛಾಯಾ ಚಿತ್ರವನ್ನು ಈಗಾಗಲೇ ನಿ.ಪಿ–4 ಎಂದು ಗುರುತಿಸಲಾಗಿದೆ. ಸದರಿ ಛಾಯಾ ಚಿತ್ರವನ್ನು ಪೊಲೀಸರು ನನ್ನ ಮಗ ಸತ್ತು ಬಿದ್ದಿದ್ದ ಜಾಗದಲ್ಲಿ ತೆಗೆದಿದ್ದರು.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನಲ್ಲಿ ಟಿ.ಸಿ ಹಾಯ್ದು ಹೋಗಿದ್ದ ಕೆ.ಇ.ಬಿ ವಿದ್ಯುತ್ ಲೈನ್ ಗಳು ಪದೇ ಪದೇ ಹರಿದು ಬೀಳುತ್ತಿದ್ದ ಕಾರಣಕ್ಕೆ ಅದನ್ನು ಸರಿಯಾಗಿ ರಿಪೇರಿ



ಮಾಡುವಂತೆ ಆರೋಪಿಗಳಿಗೆ ನಾನು ಮತ್ತು ಗ್ರಾಮದ ಹಲವಾರು ಜನರು ಕೋರಿದ್ದೆವು ಎಂದರೆ ಸರಿ. ಸದರಿ ಟಿ.ಸಿಯನ್ನು ಬೇರೊಂದು ಸ್ಥಳಕ್ಕೆ ಸ್ಥಳಾಂತರಿಸುವಂತೆ ಮನವಿ ಸಲ್ಲಿಸಿದ್ದರು ಆರೋಪಿಗಳು ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ ಎಂದರೆ ಸರಿ.

2. ಘಟನಾ ದಿನದಂದು ನನ್ನ ಮಗ ಪ್ರಭುಲಿಂಗ ರವರು ಜಮೀನಿಗೆ ಬೆಳಗ್ಗೆ 11.00 ಗಂಟೆಗೆ ಹೋಗಿದ್ದನು ಎಂದರೆ ಸರಿ. ಘಟನಾ ದಿನದಂದು ಬೆಳಗ್ಗೆ 11.00 ರಿಂದ ಸಂಜೆ 7.00 ಗಂಟೆ ಅವಧಿಯಲ್ಲಿ ಘಟನಾ ಸ್ಥಳದಲ್ಲಿ ಹಾಯ್ದು ಹೋಗಿದ್ದ ವಿದ್ಯುತ್ ತಂತಿಯು ಹರಿದು ನೆಲಕ್ಕೆ ಬಿದ್ದ ಕಾರಣ ನನ್ನ ಮಗ ಅದರ ಮೇಲೆ ಎರಡೂ ಕಾಲನ್ನು ಇಟ್ಟಾಗ ವಿದ್ಯುತ್ ಸ್ಪರ್ಶಗೊಂಡು ಮರಣ ಹೊಂದಿರುತ್ತಾನೆ ಎಂದರೆ ಸರಿ. ನನ್ನ ಮಗನ ಸಾವಿಗೆ 1 ರಿಂದ 3 ನೇ ಆರೋಪಿಗಳು ಸಮಸ್ಯೆಯಿಂದ ಘಟನಾ ಸ್ಥಳದಲ್ಲಿದ್ದ ವಿದ್ಯುತ್ ತಂತಿಗಳನ್ನು ಸರಿಯಾಗಿ ದುರಸ್ತಿಪಡಿಸದೇ ಇದ್ದ ಕಾರಣ ಮತ್ತು ಅಲ್ಲಿದ್ದ ಟಿ.ಸಿಯನ್ನು ಮತ್ತೊಂದು ಜಾಗಕ್ಕೆ ಸ್ಥಳಾಂತರಿಸದೇ ಇದ್ದ ಕಾರಣ ಆಗಿರುತ್ತದೆ ಎಂದರೆ ಸರಿ. ಪ್ರಕರಣದ ವಿದ್ಯುತ್ ಅವಘಡಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ಆರೋಪಿಗಳ ವಿರುದ್ಧ ಪಿರ್ಯಾದನ್ನು ದಾಖಲಿಸಿದ್ದನು ಎಂದರೆ ಸರಿ. ಘಟನೆಗೆ ಸಂಬಂಧಿಸಿದಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿ.

3. ದಿಃ 13-10-2022 ರಂದು ನಾನು ತೋರಿಸಿದ ವಿದ್ಯುತ್ ಅವಘಡದ ಘಟನಾ ಸ್ಥಳದಲ್ಲಿ ಚಾಸಾ-4 ಮತ್ತು 5 ರವರ ಸಮಕ್ಷಮ ಪೊಲೀಸರು ಪಂಚನಾಮೆಯನ್ನು ಜರುಗಿಸಿದ್ದರು ಎಂದರೆ ಸರಿ. ನಾನು, ಚಾಸಾ-4 ಮತ್ತು 5 ರವರು ನೀಡಿದ ಮಾಹಿತಿಯಂತೆ ಪೊಲೀಸರು ಪಂಚನಾಮೆಯನ್ನು ಬರೆದಿರುತ್ತಾರೆ ಎಂದರೆ ಸರಿ. ನ್ಯಾಯಾಲಯದಲ್ಲಿ ಇರುವ ಆರೋಪಿಗಳ ನಿರ್ಲಕ್ಷತನವೇ ನನ್ನ ಮಗನ ಸಾವಿಗೆ ಕಾರಣ ಎಂದರೆ ಸರಿ.

**ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಎಸ್.ಆರ್.ಪಿ ವಕೀಲರಿಂದ:**

1.ನಾನು ಹೇಳಿಕೆಯನ್ನು ನನ್ನ ಮಗ ಮರಣ ಹೊಂದಿದ ಸ್ಥಳದಲ್ಲಿ ನೀಡಿದ್ದೆ.



ನನ್ನೊಂದಿಗೆ ಬೇರೆ ಯಾವ ವ್ಯಕ್ತಿಗಳು ಹೇಳಿಕೆ ನೀಡಿರುತ್ತಾರೆಂದು ಗೊತ್ತಿಲ್ಲ. ಘಟನಾ ಸ್ಥಳಕ್ಕೆ ನನ್ನ ಮಗನನ್ನು ಹುಡುಕಿಕೊಂಡು ನಾನು ಒಬ್ಬನೇ ಹೋಗಿದ್ದೆ. ನನ್ನ ಮಗ ಯಾವ ಸಮಯದಲ್ಲಿ ಮರಣ ಹೊಂದಿರುತ್ತಾನೆ ಎಂದು ನಿಖರವಾಗಿ ಗೊತ್ತಿಲ್ಲ. ನನ್ನ ಮಗ ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನಲ್ಲಿ ಮರಣ ಹೊಂದಿದ್ದನು. ಗುರುಲಿಂಗಪ್ಪ ರವರ ಜಮೀನಿನಿಂದ ನನ್ನ ಜಮೀನಿಗೆ ಸುಮಾರು ಒಂದು ಮೈಲಿಯ ದೂರ ಇದೆ. ನಮ್ಮ ಜಮೀನಿಗೆ ರಸ್ತೆಯ ಮೂಲಕ ಹೋಗಬೇಕು.

2. ನನ್ನ ಜಮೀನಿನ ಸ ನಂಃ 51 ಮತ್ತು 52. ಸ ನಂಃ 51 ರ ಜಮೀನಿನಲ್ಲಿ ನಮ್ಮ ಕೊಳವೆ ಬಾವಿ ಇದೆ. ಸದರಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕವನ್ನು ಗುರುಲಿಂಗಪ್ಪ ಚಿಕ್ಕೇರಿ ರವರ ಜಮೀನಿನಲ್ಲಿ ಇರುವ ಟಿ.ಸಿಯಲ್ಲಿ ತೆಗೆದುಕೊಳ್ಳಲಾಗಿದೆ ಎಂಬ ಸೂಚನೆಗೆ ಸಾಕ್ಷಿಯು ಚಂದ್ರಶೇಖರ ಗೂಳಿ ರವರ ಜಮೀನಿನಿಂದ ಪಡೆಯಲಾಗಿದೆ ಎಂದು ನುಡಿಯುತ್ತಾರೆ. ಕೊಳವೆ ಬಾವಿಯನ್ನು ಸುಮಾರು 10 ವರ್ಷಗಳ ಹಿಂದೆ ತೆಗೆಸಲಾಗಿದೆ. ಸದರಿ ಕೊಳವೆ ಬಾವಿಗೆ ಅಕ್ರಮ – ಸಕ್ರಮ ಯೋಜನೆ ಅಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆಯಲಾಗಿದೆ ಎಂದರೆ ಸರಿ. ಸದರಿ 10 ವರ್ಷಗಳ ಹಿಂದೆ ವಿದ್ಯುತ್ ಸಂಪರ್ಕವನ್ನು ಹೊಸದಾದ ವಿದ್ಯುತ್ ಪರಿಕರಗಳನ್ನು ಉಪಯೋಗಿಸಿ ನೀಡಲಾಗಿತ್ತು ಎಂದರೆ ಸರಿ. ವಿದ್ಯುತ್ ತಂತಿಯನ್ನು ಬದಲಾಯಿಸುವಂತೆ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿಯನ್ನು ನೀಡಿದ್ದೆ. ಸದರಿ ಅರ್ಜಿಯನ್ನು ತನಿಖಾಧಿಕಾರಿಗೆ ನೀಡಿರುವುದಿಲ್ಲ.

3. ನಾನು ಘಟನಾ ಸ್ಥಳಕ್ಕೆ ನನ್ನ ಮಗನನ್ನು ನೋಡಲು ಹೋದಾಗ ವಿದ್ಯುತ್ ತಂತಿಯು ಸುತ್ತಿಕೊಂಡು ಬಿದ್ದಿತ್ತು. ವಿದ್ಯುತ್ ತಂತಿಯು ಕಾಲಿಗೆ ತಗುಲಿದರೆ ಎರಡೂ ಕಾಲುಗಳು ಸುಟ್ಟು ಹೋಗುತ್ತವೆ ಎಂದರೆ ಸರಿ. ನನ್ನ ಮಗ ವಿದ್ಯುತ್ ತಂತಿಗಳನ್ನು ತುಳಿದು ಮರಣ ಹೊಂದಿರುತ್ತಾನೆ. ಸಾಕ್ಷಿಗೆ ದೋಷಾರೋಪಣಾ ಪಟ್ಟಿಯಲ್ಲಿ ಇರುವ ಒಂದು ಛಾಯಾ ಚಿತ್ರವನ್ನು ತೋರಿಸಿ ಅದರಲ್ಲಿ ಮರಣ ಹೊಂದಿರುವ ನನ್ನ ಮಗನ ಬಲಗಾಲನ್ನು



ನೋಡಿದರೆ ಕಾಲಿನ ಮೇಲ್ಭಾಗದಲ್ಲಿ ವಿದುತ್ ಸುಟ್ಟಿದ್ದ ಗಾಯ ಕಂಡು ಬರುತತದೆ ಎಂದರೆ ಸರಿ. ನನಗೆ ಘಟನಾ ಸ್ಥಳದ ಚಕ್ಕುಬಂದಿ ಗೊತ್ತಿರುವುದಿಲ್ಲ. ಗುರುಲಿಂಗಪ್ಪ ರವರ ಜಮೀನಿನಲ್ಲಿ ಇದ್ದ ಟಿ.ಸಿಯ ಸಂಪರ್ಕದ ತಂತಿಗಳಲ್ಲಿ ಕಾರ್ಬೋನನ್ನು ಕೊಕ್ಕೆ ಹಾಕಿ ಶುಚಿ ಮಾಡಲು ವಿದ್ಯುತ್ ತಂತಿಯನ್ನು ಎಳೆದಾಗ ಅದು ತುಂಡಾಗಿ ನನ್ನ ಮಗನ ಕಾಲಿಗೆ ಬಿದ್ದು ಮರಣ ಹೊಂದಿರುತ್ತಾನೆ ಎಂದರೆ ಸರಿಯಲ್ಲ. ವಿದ್ಯುತ್ ಅವಘಡಕ್ಕೆ ನನ್ನ ಮಗನ ಸದರಿ ತಪ್ಪು ಕಾರಣವಾಗಿದ್ದು, ಅವನ ಸಾವಿಗೆ ಆರೋಪಿಗಳು ಕಾರಣರಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್

ಸಾಕ್ಷಿದಾರರ ಸಹಿ